ಇ. ಕೆರೆ ಮತ್ತು ಜಲಾಶಯಗಳನ್ನು ಅಭಿವೃದ್ಧಿಪಡಿಸಿ ಮೀನುಗಾರಿಕೆಗೆ ಉತ್ತೇಜನ ನೀಡಲು ಸರ್ಕಾರ ಮುಂದಾಗುವುದೇ?

ಶ್ರೀ ಧರಂಸಿಂಗ್ (ಮಾನ್ಯ ಮುಖ್ಯ ಮಂತ್ರಿಗಳು) ;

ಅ. ಬಾಗಲಕೋಟೆ ಜಿಲ್ಲೆಯಲ್ಲಿ ಮೀನುಮರಿ ಉತ್ಪಾದನೆ , ಸಾಕಾಣಿಕೆ ಮತ್ತು ಹಂಚಿಕೆ ಯೋಜನೆಯಡಿಯಲ್ಲಿ 1.68 ಲಕ್ಷ ಮೀನುಮರಿಗಳನ್ನು ಮೀನುಗಾರಿಕೆ ಸಹಕಾರ ಸಂಘಗಳಿಗೆ ಗುತ್ತಿಗೆಗೆ ನೀಡಲಾದ ಕೆರೆಗಳಲ್ಲಿ ಬಿತ್ತನೆ ಮಾಡಲಾಗಿದೆ. "ಮೀನುಗಾರಿಕೆ ಸಹಕಾರ ಸಂಘಗಳಲ್ಲಿ ಪೂಡಿಕೆ" ಕಾರ್ಯಕ್ರಮದಡಿ ರೂ.20,000–00 ಶೇರು ಬಂಡವಾಳ ನೀಡುವ ವಿಷಯ ಹಾಗೂ "ಮೀನುಗಾರಿಕೆ ಸಲಕರಣೆಗಳನ್ನು ಖರೀದಿಸಲು ರೂ.20,000–00 ಸಾಲವನ್ನು ಕಾಟಾಪುರ ಮೀನುಗಾರಿಕೆ ಸಹಕಾರ ಸಂಘಕ್ಕೆ ನೀಡುವ ವಿಷಯಗಳು ಮಂಜೂರಾತಿಗಾಗಿ ಬಾಗಲಕೋಟೆ ಜಿಲ್ಲಾ ಪಂಚಾಯತ್ ಪರಿಶೀಲನೆಯಲ್ಲಿವೆ.

ಆ. ಜಿಲ್ಲೆಯಲ್ಲಿ ಲಭ್ಯವಿರುವ ಜಲಸಂಪನ್ಮೂಲಗಳಾದ ದೊಡ್ಡ ಕೆರೆ ಮತ್ತು ನದಿಗಳ ಮೀನು ಪಾಶುವಾರು ಹಕ್ಕನ್ನು ಮೀನುಮರಿ ಬಿತ್ತನೆ ಮಾಡಿ ಅಭಿವೃದ್ಧಿಪಡಿಸಲು ಮೀನುಗಾರಿಕೆ ಸಹಕಾರ ಸಂಘಗಳಿಗೆ ಗುತ್ತಿಗೆ ಆಧಾರದ ಮೇಲೆ ವಿಲೇವಾರಿ ಮಾಡಲಾಗುತ್ತದೆ.

ಇ. ಹೌದು, ಸರ್ಕಾರವು ಕೆರೆ ಮತ್ತು ಜಲಾಶಯಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಪಡಿಸಲು ಆಸಕ್ತಿ ಹೊಂದಿದೆ, ಬಾಗಲಕೋಟೆ ಜಿಲ್ಲೆಯಲ್ಲಿ ಜಲಾಶಯ ಇರುವುದಿಲ್ಲ. ಆದರೆ ಕೆರೆ, ನದಿಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಆಧಾರದ ಮೀನುಗಾರಿಕೆ ಸಹಕಾರ ಸಂಘಗಳಿಗೆ ವಿಲೇವಾರಿ ಮಾಡಿ ಅವುಗಳಲ್ಲಿ ಮೀನುಮರಿ ಬಿತ್ತನೆ ಮಾಡಿ ಅಭಿವೃದ್ಧಿಗೊಳಿಸಲಾಗುತ್ತಿದೆ.

1559(2147) ಶ್ರೀ ಧ್ರುವನಾರಾಯಣ ಆರ್.(ಸಂತೇಮರಳ್ಳಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಬೆಳ್ಳಿ ಬೆಳಕು ಯೋಜನೆಯಡಿಯಲ್ಲಿ ಮೀನುಗಾರಿಕೆ ಇಲಾಖೆಯಿಂದ ಮಂಜೂರಾದ ಮನೆಗಳೆಷ್ಟು ;

ಆ. ಸಂತೇಮರಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ಬೆಳ್ಳಿ ಬೆಳಕು ಯೋಜನೆಯಡಿಯಲ್ಲಿ ನೀಡಿರುವ ಮನೆಗಳೆಷ್ಟು ?

ಶ್ರೀ ಧರಂಸಿಂಗ್ (ಮಾನ್ಯ ಮುಖ್ಯ ಮಂತ್ರಿಗಳು);

ಅ. ಬೆಳ್ಳಿ ಬೆಳಕು ಯೋಜನೆಯು ಮೀನುಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳ್ಳುತ್ತಿಲ್ಲ. ಮೀನುಗಾರಿಕೆ ಇಲಾಖೆಯಿಂದ ಮತ್ಸ್ಯ ಆಶ್ರಯ ಯೋಜನೆಯು ಅನುಷ್ಠಾನಗೊಳ್ಳುತ್ತಿದ್ದು, ಮತ್ಸ್ಯ ಆಶ್ರಯ ಯೋಜನೆಯಡಿ ಒಟ್ಟು 10,000 ಮನೆಗಳನ್ನು 1998–99 ರಿಂದ 2003–04ರ ಅವಧಿಯಲ್ಲಿ ಮೀನುಗಾರರಿಗೆ ಮಂಜೂರು ಮಾಡಲಾಗಿದೆ.

ಆ. ಮತ್ಸ್ಯ ಆಶ್ರಯ ಯೋಜನೆಯಡಿ ಸಂತೇಮರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ 10 ಮನೆಗಳನ್ನು ನೀಡಲಾಗಿದೆ.

1560 (2148)ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;

ಅ. ಚಾಮರಾಜನಗರ ತಾಲ್ಲೂಕಿನಲ್ಲಿ 2003 ರಿಂದ 2004ರ ವರೆಗೆ ಸರ್ಕಾರದಿಂದ ಎಷ್ಟು ಜನರಿಗೆ ಸರ್ಕಾರಿ ಜಮೀನನ್ನು ಗಣಿಗಾರಿಕೆಗಾಗಿ ಮಂಜೂರು ಮಾಡಲಾಗಿದೆ ;